ಕಣ್ಣೆದುರು ಇರುತ್ತಾರೆ. ಕೇಳುತ್ತ ಕೇಳುತ್ತ ಕಾಣಿಸುವ ಅವರ ಕಣ್ಣಿನ ಮಿಂಚುಗಳು, ಅವರ ಹಣೆಯ ಮೇಲೆ ಮೂಡುವ ನಗು, ವ್ಯಕ್ತವಾಗಿ ಮೂಗಿನ ನೇರಕ್ಕೇ ಕಾಣಿಸುವ ಅವರ ಅಪನಂಬಿಕೆ ಅಥವಾ ಕುತೂಹಲ, ಆಗಾಗ ಸ್ಫೋಟಗೊಳ್ಳುವ ಅಟ್ಟಹಾಸದಂತಹ ನಗು ಇವೆಲ್ಲವನ್ನೂ ನಾನೂ ಅನುಭವಿಸಿ ಕತೆ ಹೇಳುವುದು ಬೇರೆಯಲ್ಲ, ಕೇಳುವುದು ಬೇರೆಯಲ್ಲ ಎಂಬಂತಹ ಒಂದು ಅನೂಹ್ಯ ಕಾಲವೇ ಅಲ್ಲಿ ಸೃಷ್ಟಿಯಾಗುತ್ತಿದೆ ಅನ್ನಿಸುತ್ತಿತ್ತು, ನನ್ನ ಊರಿನ ಕಾಡುದಾರಿಯ ಬದಿಯ ಒಂದು ಸಣ್ಣ ಕಲ್ಲು ಬೆಂಚಿನ ಮೇಲೆ, ಮೈಸೂರಿನ ಮುಸ್ಲಿಂ ಹಾಸ್ಟೆಲಿನ ನೀಲಗಿರಿ ಮರಗಳ ಕೆಳಗಿನ ಕಲ್ಲ ಹಾಸಿನ ಮೇಲೆ, ಕುಕ್ಕರಹಳ್ಳಿ ಕೆರೆಯ ಲತಾಮಂಟಪಗಳಲ್ಲಿ, ಮಂಗಳೂರಿನ ತಣ್ಣೀರುಬಾವಿಯ ಕಡಲ ತೀರದ ಗಾಳಿ ಮರಗಳ ಅಡಿಯಲ್ಲಿ, ಮಡಿಕೇರಿಯ ರಾಜಾಸೀಟಿನ ಮೇಲಿನ ಸ್ಟೋನ್ ಹಿಲ್ ಗುಡ್ಡಗಳ ನೆರಳ ಹಾಸಿನ ಕೆಳಗೆ ಕಾಲ ದೇಶ ಕತ್ತಲು ಬೆಳಕುಗಳ ಪರಿವೆಯಿಲ್ಲದೆ ಗಂಟೆಗಟ್ಟಲೆ ಕತೆಗಳನ್ನು ಹೇಳುತ್ತಿದ್ದ ದಿನಗಳನ್ನು ನೆನೆದುಕೊಂಡರೆ ಈಗಲೂ ಬಾಲ್ಯದಂತಹ ಎಳೆಬಿಸಿಲೊಂದು ಮಾಯವಾಗಿ ಹೋದಂತೆ ಸಂಕಟವಾಗುತ್ತದೆ. ನನ್ನ ಕತೆ ಹೇಳುವ ಕಾಲ ಕಳೆದು ಹೋಗಿರದಿದ್ದರೂ ಕತೆ ಕೇಳುತ್ತಿದ್ದವರು ಆ ರೋಮಾಂಚನವನ್ನು ಕಳೆದುಕೊಂಡಿರುವುದು ನನಗೆ ದೂರದಿಂದಲೇ ಗೊತ್ತಾಗಿಬಿಡುತ್ತಿದೆ. ಒಂದು ಸಣ್ಣಗಿನ ವಿಷಾದ, ಒಂದು ತಣ್ಣಗಿನ ಕ್ರೌರ್ಯದಂತಹ ಸ್ವಎಚ್ಚರ ನನ್ನನ್ನು ಇತ್ತೀಚೆಗೆ ಕತೆ ಹೇಳುವುದರಿಂದ ವಿಮುಖವಾಗಿಸುತ್ತಿದೆ. ಎಂತೆಂತಹ ಗೆಳೆಯರು, ಕವಿಗಳು, ಕತೆಗಾರರು, ಸುಂದರಿಯರು, ಸುಂದರರು ಒಬ್ಬ ರಾಜಕುಮಾರನ ಹಾಗೆ ನನ್ನನ್ನು ಕಣ್ಣಲ್ಲೇ ಆರಾಧಿಸುತ್ತಾ ಕತೆ ಕೇಳುತ್ತಿದ್ದರು! ಈಗ ಅವರೆಲ್ಲರೂ ಅವರವರ ಲೋಕದಲ್ಲಿ ವಿರಾಜಮಾನರಾಗಿರುವುದ ನೋಡುತ್ತಿದ್ದರೆ ಕತೆ ಹೇಳುವುದು ಎಷ್ಟು ದೊಡ್ಡ ಯಾಮಾರಿಸಿಕೊಳ್ಳುವ ಕೆಲಸವಾಗಿತ್ತು ಎಂದು ವ್ಯಗ್ರನಾಗುತ್ತೇನೆ; ಜೊತೆಗೆ ಲೋಕದ ಜೊತೆಗೆ ವಿನಾಕಾರಣ ಕಠಿಣನಾಗುತ್ತಿದ್ದೇನೆ.

ಇದಕ್ಕಿಂತಲೂ ದೊಡ್ಡದಾದ, ಕ್ರೂರವಾದ ಮತ್ತು ತಮಾಷೆಯಾದ ವಿಷಯವೆಂದರೆ ನನ್ನ ಕತೆ ಹೇಳುವ ಕಲೆಯನ್ನೇ ಬಳಸಿಕೊಂಡು ನನಗೆ ರಾಜಕೀಯ ಪಾಠಗಳನ್ನು ಕಲಿಸುವ ವ್ಯವಸ್ಥೆಯೊಂದನ್ನು ನನ್ನ ಯೌವನದ ಕಾಲದಲ್ಲಿ ರೂಪಿಸಲಾಗಿತ್ತು. ಏಕಕಾಲದಲ್ಲಿ ಕ್ರಾಂತಿಕಾರಿಯೂ ಕತೆಗಾರನೂ ಆಗಿದ್ದ ನಾನು ಗುಪ್ತವಾಗಿ ಒಬ್ಬ ದೊಡ್ಡ ಪ್ರೇಮಿಯೂ ಆಗಿದ್ದೆ. ಕತೆ ಹೇಳುವುದನ್ನೂ, ಬರೆಯುವುದನ್ನೂ, ಓದುವುದನ್ನೂ, ಕ್ರಾಂತಿಯ ಕೆಲಸಗಳನ್ನೂ ಬಿಟ್ಟು ಇದ್ದಕ್ಕಿದ್ದಂತೆ ಯಾರಿಗೂ ಗೊತ್ತಾಗದಂತೆ ದಿನಗಟ್ಟಲೆ ಮಾಯವಾಗಿ ಬಿಡುತ್ತಿದ್ದೆ. ಅದೊಂದು ತರಹದ ಬೆಳಗಿನ ಹೊತ್ತಿನ ಇಬ್ಬನಿಯ ಹನಿಯಂತಹ ಚುಮುಚುಮು ಪ್ರೇಮ. ಅವಳಿಗೂ ನನಗೂ ಸುಮಾರು ನೂರು ರಹದಾರಿಗಿಂತ ಹೆಚ್ಚು ದೂರವಿತ್ತು. ಇಬ್ಬರಿಗೂ ಕವಿತೆ ಅಂದರೆ ಇಷ್ಟ. ಇಬ್ಬರಿಗೂ ಸಿಕ್ಕಾಪಟ್ಟೆ ಭಯ ಮತ್ತು ನಾಚಿಕೆ. ನೂರಾರು ರಹದಾರಿ ದೂರವಿದ್ದ ಅವಳನ್ನು ಸುಮ್ಮನೆ ನೋಡಿ ಬರಲು ನಾನು ಆಗಾಗ ಭೂಗತನಾಗಿ ಬಿಡುತ್ತಿದ್ದೆ. ಹೋದವನು ಅಲ್ಲೂ ಮೈಲಿಗಟ್ಟಲೆ ಕತೆ ಹೇಳಿ, ಕತೆ ಕೇಳಿ ಅವಳ ಕಣ್ಣ ಅಚ್ಚರಿಗಳನ್ನು ನೋಡಿ ಬರುತ್ತಿದ್ದೆ. ಬಂದವನು ಎಲ್ಲಿ ಹೋಗಿದ್ದೆ ಎಂಬ ಗುಟ್ಟನ್ನು ಯಾರಿಗೂ ಹೇಳುತ್ತಿರಲಿಲ್ಲ. ನನ್ನ ಈ ರೀತಿಯ ದಿಢೀರ್ ಮಾಯವಾಗುವಿಕೆ ನನ್ನ ಕ್ರಾಂತಿಕಾರೀ ಸಂಗಾತಿಗಳಿಗೆ ಒಂದು ಸವಾಲಾಗಿತ್ತು. ರಾಜಕೀಯ ಕಾರಣಗಳಿಗಾಗಿ ಭೂಗತವಾಗುವುದನ್ನು ಸಕಾರಣವಾಗಿ ಬೆಂಬಲಿಸುವವರಾಗಿದ್ದ ಅವರಿಗೆ ವಿನಾಕಾರಣ ಮಾಯವಾಗುತ್ತಿದ್ದ ನನ್ನ ಕಾಣದಾಗುವಿಕೆ ಒಂದು ವೈಚಾರಿಕವಾದ ಕಗ್ಗಂಟಿನಂತೆ ತೋರತೊಡಗಿತ್ತು. ಇದನ್ನು ಹೇಗಾದರೂ ಬಗೆಹರಿಸಬೇಕೆಂದು ಉನ್ನತಮಟ್ಟದಲ್ಲಿ ತೀರ್ಮಾನಿಸಿದ ಅವರು ಕತೆ ಹೇಳುವ ನನ್ನ ದೌರ್ಬಲ್ಯವನ್ನು ಬಳಸಿಕೊಂಡರು.